# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ, ವಿದ್ಯಾರಣ್ಯಪುರ

ಸಂ. ನೋ.ಅ/ಬಿ.ಬಿ.ಎಂ.ಪಿ/ವಿ-14 /ಪಿಆರ್ ಸಂ/02/2022-23

ವಿದ್ಯಾರಣ್ಯಪುರ ವಾರ್ಡ್ ಕಛೇರಿ
ಇಂದಿರಾ ಕ್ಯಾಂಟೀನ್ ಪಕ್ಕ,
ಹೆಚ್.ಎಂ.ಟಿ ಲೇಔಟ್, 1ನೇ ಬ್ಲಾಕ್,
ಬಿಬಿಎಂಪಿ, ಬೆಂಗಳೂರು 560097
ದಿನಾಂಕ : 19/09/2022

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 14 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 19/09/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದವರ ಹೆಸರು | ಪದನಾಮ |
|---|---|---|
| 1 | ಶ್ರೀಮತಿ ರಶ್ಮಿ | ನೋಡಲ್ ಅಧಿಕಾರಿ ಹಾಗೂ ಹಿರಿಯ ಸಹಾಯಕ ನಿರ್ದೇಶಕರು (ತೋಟಗಾರಿಕೆ), ತೋಟಗಾರಿಕೆ ವಿಭಾಗ |
| 2 | ಶ್ರೀ ಅರ್ಚನಾ | ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು |
| 3 | ಶ್ರೀ ಬಾಬು ರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) |
| 4 | ಡಾ||ಪುಷ್ಪಲತ ಪಿ.ಎಂ | ವೈದ್ಯಾಧಿಕಾರಿಗಳು |
| 5 | ಶ್ರೀ ಸಿದ್ದರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ ನಾಗರಾಜು ಅಂಗಡಿ | ನೀರು ಪರಿವೀಕ್ಷಕರು |
| 7 | ಶ್ರೀ.ರಘು | ವಿಪತ್ತು ಪರಿಣಿತರು |
| 8 | ಶ್ರೀ.ಕಿರಣ್ | ಸಾರ್ವಜನಿಕರು |
| 9 | ಶ್ರೀ.ಶ್ರೀನಿವಾಸ್ | ಸಾರ್ವಜನಿಕರು |
| 10 | ಶ್ರೀ. ಶ್ರೀಕಾಂತ್ | ಸಾರ್ವಜನಿಕರು |
| 11 | ಶ್ರೀ.ವಿಶ್ವನಾಥ್ | ಸಾರ್ವಜನಿಕರು |
| 12 | ಶ್ರೀಮತಿ ಮಾಧುರಿ | ಸಾರ್ವಜನಿಕರು |

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿ ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸಿ ಇಂದಿನ ಸಭೆಯನ್ನು ನಡೆಸಲಾಯಿತು.

ದಿನಾಂಕ 19/09/2022ರಂದು ಚರ್ಚಿಸಿರುವ ಸಭಾ ನಡವಳಿ

| ಕ್ರ.ಸಂ. | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ/ಇಲಾಖೆ |
|---|---|---|---|
| 1 | ವಾರ್ಡ್ ನಕ್ಷೆ ಹಾಗೂ ಬಡಾವಣೆಗಳ ಹೆಸರನ್ನು ಪ್ರದರ್ಶಿಸಲು, ವಾರ್ಡ್ ಕಮಿಟಿ ಗ್ರೂಪ್‌ನಲ್ಲಿ ಈ ಹಿಂದೆ ಇದ್ದಂತಹ ಸದಸ್ಯರುಗಳ ಹೆಸರುಗಳನ್ನು ವಾರ್ಡ್ ನಂ 14ರ ವಾಟ್ಸ್‌ಆಪ್ ಗ್ರೂಪ್‌ಗೆ ಸೇರಿಸಲು ಕೋರಿದರು. ಮತ್ತು ವಾರ್ಡ್ ಸಮಿತಿ ಸಭೆಯ ಸಭಾ ಸೂಚನಾ ಪತ್ರವನ್ನು ಕಛೇರಿ ಹೊರಗೆ ಪ್ರದರ್ಶಿಸಲು ಸೂಚಿಸಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ ರವರಿಗೆ ಹೊಸದಾಗಿ ರಚನೆಯಾದ ವಾರ್ಡ್ ನಕ್ಷೆ ಪಡೆದುಕೊಂಡು ಪ್ರದರ್ಶಿಸಲು ತಿಳಿಸಲಾಯಿತು | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ |

| | | | |
|---|---|---|---|
| 2 | ಸೋಮಣ್ಣ ಗಾರ್ಡನ್, ಅನ್ನಪೂಣೇಶ್ವರಿ ಬಡಾವಣೆಯಲ್ಲಿ ರಸ್ತೆ ಹಾಳಾಗಿರುವ ಬಗ್ಗೆ ಹಾಗೂ ವಿರೂಪಾಕ್ಷಪುರ, ಕೆನರಾ ಬ್ಯಾಂಕ್ ಬಡಾವಣೆಯ ರಸ್ತೆ 2 ಕಡೆಗಳಲ್ಲಿ ಹಾಗೂ ವಿರೂಪಾಕ್ಷಪುರ ರಸ್ತೆ, ಮಾರಮ್ಮ ದೇವಸ್ಥಾನದ ರಸ್ತೆಯಲ್ಲಿ ಕಲ್ವಟ್ ತುಂಬಿ ನೀರು ರಸ್ತೆಯಲ್ಲಿ ಹರಿಯುತ್ತಿದ್ದು ಸರಿಪಡಿಸಲು ಕೋರಿದರು. | ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಆದ್ಯತೆ ಮೇರೆಗೆ ಕ್ರಮ ವಹಿಸಲು ತಿಳಿಸಲಾಯಿತು | ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ |
| 3 | ಏರ್‌ಟೆಲ್ ಜಿಯೋ, ಬೆಸ್ಕಾಂ ನವರು ರಾತ್ರೋ ರಾತ್ರಿ ರಸ್ತೆ ಅಗೆದು ಹಾಳು ಮಾಡಿರುವ ಬಗ್ಗೆ ದೂರು ನೀಡಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ಕ್ರಮ ವಹಿಸಲು ತಿಳಿಸಲಾಯಿತು ಮತ್ತು ಈ ತರಹ ಪ್ರಕರಣಗಳು ಕಂಡುಬಂದಲ್ಲಿ ವಲಯ ನಿಯಂತ್ರಣಾ ಕೊಠಡಿಯಲ್ಲಿ ದೂರು ದಾಖಲಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ |
| 4 | ಜೈ ಹನುಮಾನ್ ಬಡಾವಣೆ, 2ನೇ ಅಡ್ಡರಸ್ತೆಯಲ್ಲಿ ರಸ್ತೆ ಒತ್ತುವರಿ ಮಾಡಿ ಮನೆ ಕಟ್ಟುತ್ತಿರುವುದರಿಂದ ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ ರವರು ಈ ಕುರಿತು ಸೂಕ್ತ ಕ್ರಮ ವಹಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ ಬಿಬಿಎಂಪಿ |
| 5 | ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಯ ನಾಮಫಲಕಗಳನ್ನು ಹೊಸದಾಗಿ ಅಳವಡಿಸಲು ಹಾಗೂ ತಪ್ಪಾಗಿ ಅಳವಡಿಸಿರುವ ನಾಮಫಲಕಗಳನ್ನು ಸರಿಪಡಿಸಲು ಕೋರಿದರು. | ಸಹಾಯಕ ಅಭಿಯಂತರರು ರವರಿಗೆ ಕ್ರಮ ವಹಿಸಲು ತಿಳಿಸಲಾಯಿತು | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ |
| 6 | ವಾರ್ಡ್‌ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಮೇಲ್ವಿಚಾರಕರ ವಿವರ ನೀಡಲು ಕೋರಿರುತ್ತಾರೆ | ಸಂಬಂಧಿಸಿದ ಇಲಾಖೆಗೆ ಕ್ರಮ ವಹಿಸಲು ತಿಳಿಸಲಾಗುವುದು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಘ.ತ್ಯಾ.ನಿ/ಕಿರಿಯ ಆರೋಗ್ಯ ಪರಿವೀಕ್ಷಕರು |
| 7 | ತಳ್ಳುವ ಗಾಡಿಗಳಲ್ಲಿ ಇನ್ನೂ ಸಹ ಪ್ಲಾಸ್ಟಿಕ್ ಬಳಸುತ್ತಿರುವುದರಿಂದ ಪ್ಲಾಸ್ಟಿಕ್‌ಅನ್ನು ಸರಿಯಾಗಿ ಸೀಜ್ ಮಾಡಲು ಕೋರಿರುತ್ತಾರೆ. | ಆರೋಗ್ಯ ಇಲಾಖೆಗೆ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ. | ಹಿ.ಆ.ಪರಿವೀಕ್ಷಕರು |
| 8 | ರಸ್ತೆ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿರುವುದಿಲ್ಲ, ಎಲ್ಲಾ ಬಡಾವಣೆಗಳ ರಸ್ತೆ ಗುಡಿಸುವಿಕೆ ಕಾರ್ಯ ನಿರ್ವಹಿಸಲು, ಸರ್ ಎಂ.ವಿ ಬಡಾವಣೆ, ವಿರೂಪಾಕ್ಷಪುರ, ತಿಂಡ್ಲು, ಜೈ ಹನುಮಾನ್ ಬಡಾವಣೆ ಹಾಗೂ ಇನ್ನೂ ಕೆಲವು ಬಡಾವಣೆಗಳಲ್ಲಿ ಒಣತ್ಯಾಜ್ಯ ಸಂಗ್ರಹಣೆ ಕಾರ್ಯ ಸಮರ್ಪಕವಾಗಿರುವುದಿಲ್ಲ, ತ್ಯಾಜ್ಯ ಸಂಗ್ರಹಣೆ ಗಾಡಿ ಜೋರಾಗಿ ಮ್ಯೂಸಿಕ್ ಹಾಕದೆ ಬರುತ್ತಿರುವುದರಿಂದ ಮನೆಯ ಒಳಗೆ ಇದ್ದವರಿಗೆ ಗೊತ್ತಾಗುವುದಿಲ್ಲ ಆದ್ದರಿಂದ ಜೋರಾಗಿ ಮ್ಯೂಸಿಕ್ ಹಾಕಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಕಿ.ಆ.ಪ ರವರು ಕ್ರಮ ವಹಿಸುವುದಾಗಿ ತಿಳಿಸಿದರು ಮತ್ತು ಈಗಾಗಲೇ ಹೊಸದಾಗಿ ಟೆಂಡರ್ ಆಹ್ವಾನಿಸಿದ್ದು, ಶೀಘ್ರದಲ್ಲೇ ಸಮಸ್ಯೆ ಬಗೆಹರಿಸಲಾಗುವುದು ಎಂದು ತಿಳಿಸಿದರು. | ಸ.ಕಾ.ಅ ಘ.ತ್ಯಾ.ನಿ |

| | | | |
|---|---|---|---|
| 9 | ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುತ್ತಿದ್ದರೂ ಸಹ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗುತ್ತಿರುವುದರ ಬಗ್ಗೆ ಗಮನಹರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಲಿಂಕ್ ವರ್ಕರ್ ಒಬ್ಬರು ಒಣ ತ್ಯಾಜ್ಯ ಮತ್ತು ಹಸಿತ್ಯಾಜ್ಯವನ್ನು ಮಿಶ್ರಣ ಮಾಡಿ ಕೊಟ್ಟಂತಹವರಿಗೆ ದಂಡ ವಿಧಿಸಿದ ನಂತರ ಪ್ರತ್ಯೇಕವಾಗಿ ನೀಡುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದಾಗ್ಯೂ ಬ್ಲಾಕ್ ಸ್ಪಾಟ್‌ಗಳನ್ನು ಕಡಿಮೆ ಮಾಡಲು ಘನ ತ್ಯಾಜ್ಯ ನಿರ್ವಹಣೆ ಇಲಾಖೆಗೆ ಸೂಚಿಸಲಾಯಿತು. | ಸ.ಕಾ.ಅ ಘ.ತ್ಯಾ.ನಿ |
| 10 | ತಿಂಡ್ಲು ಹಾಗೂ ಸಪ್ತಗಿರಿ ಬಡಾವಣೆ ಮುಖ್ಯ ರಸ್ತೆಗಳಲ್ಲಿ ಕೇಬಲ್‌ಗಾಗಿ ರಸ್ತೆಗಳನ್ನು ಅಗೆದಿದ್ದು, ಸರಿಯಾಗಿ ಗುಂಡಿ ಮುಚ್ಚದ ಕಾರಣ, ಸದರಿ ಗುಂಡಿಯಲ್ಲಿ ಕಸ ಹಾಕುತ್ತಿರುವುದರಿಂದ ಗಮನಹರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಕಿ.ಅ.ಪ ರವರು ಕ್ರಮ ವಹಿಸುವುದಾಗಿ ತಿಳಿಸಿದರು. | ಸ.ಕಾ.ಅ ಘ.ತ್ಯಾ.ನಿ |
| 11 | ಮಳೆ ಬಂದು ಮರದ ರೆಂಬೆ ಕೊಂಬೆಗಳು ಎಲ್ಲೆಂದರಲ್ಲಿ ಬಿದ್ದಿರುತ್ತವೆ ಆದ್ದರಿಂದ ಷ್ರಡರ್ಸ್ ಸಹಾಯದಿಂದ ತೆರವುಗೊಳಿಸಲು ಕೋರಿದರು. | ಕಿ.ಅ.ಪ ಈಗಾಗಲೇ ಇರುವಂತಹ ಷ್ರಡರ್ಸ್‌ನಿಂದ ಲೀವ್ಸ್‌ಅನ್ನು ಪುಡಿ ಮಾಡಲಾಗುತ್ತಿದ್ದು, ಸದರಿ ಷ್ರೆಡರ್ಸ್‌ನಿಂದ ಕೊಂಬೆಗಳನ್ನು ಷ್ರೆಡ್ ಮಾಡಲು ಸಾದ್ಯವಿಲ್ಲ ಆದ್ದರಿಂದ ಹೆಚ್ಚಿನ ಕಾರ್ಯ ಕ್ಷಮತೆ ಇರುವ ಶ್ರೆಡ್ಡರ್‌ಗಳನ್ನು ಅಳವಡಿಸಲು ಕ್ರಮವಹಿಸಲು ಮತ್ತು ಸದ್ಯ ಚಾಲ್ತಿಯಲ್ಲಿರುವ ಶ್ರೆಡ್ಡರ್‌ಗಳನ್ನು ಪ್ರತಿನಿತ್ಯ ಬಳಸಿಕೊಳ್ಳಲು ತೀರ್ಮಾನಿಸಲಾಯಿತು. | ಸ.ಕಾ.ಅ, ಘ.ತ್ಯಾ.ನಿ<br>ಹಿ.ಸ.ತೋ.ನಿ (ತೋಟಗಾರಿಕೆ ವಿಭಾಗ) |
| 12 | ಹಸಿ ಕಸದ ಜೊತೆಯಲ್ಲಿಯೇ ಒಣ ಕಸವನ್ನು ಸಂಗ್ರಹಿಸಿದರೆ ಒಣ ಕಸದ ಸಮಸ್ಯ ಬಗೆಹರಿಯುವುದಾಗಿ ಸಲಹೆ ನೀಡುತ್ತಾರೆ | ಘ.ತ್ಯಾ.ನಿ ವಿಭಾಗಕ್ಕೆ<br>ಈ ವಿಷಯದ ಸಾದ್ಯ ಸಾದ್ಯತೆಗಳ ಬಗ್ಗೆ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ. | ಸ.ಕಾ.ಅ, ಘ.ತ್ಯಾ.ನಿ |
| 13 | ನೀರಿನ ಬಿಲ್ಲಿನಲ್ಲಿ 400.00 ರೂ.ಗಳು ಬರುವ ಜಾಗದಲ್ಲಿ 4000.00 ಬರುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು ಪ್ರಶ್ನಿಸಲು ಬಡಬ್ಲ್ಯೂಎಸ್‌ಎಸ್‌ಬಿ ಗೆ ಹೋದರೆ ಅವರು ಈಗ ನೀರಿನ ಬಿಲ್ಲನ್ನು ಪಾವತಿಸಿ ನಂತರ ಮೀಟರ್‌ಅನ್ನು ಸರಿಯಾಗಿ ಮಾಪನ ಮಾಡಿಕೊಂಡು ಬಿಲ್ಲಿನ ಮೊತ್ತವನ್ನು ಮುಂದಿನ ಕಂತುಗಳಲ್ಲಿ ಕಡಿಮೆ ಮಾಡಲಾಗುವುದು ಎಂಬ ಅಸಡ್ಡೆತನದ ಉತ್ತರಗಳನ್ನು ನೀಡುತ್ತಿರುತ್ತಾರೆ ಆದ್ದರಿಂದ ಇದರ ಬಗ್ಗೆ ಗಮನ ವಹಿಸಲು ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಕ್ರಮ ವಹಿಸಲು ತಿಳಿಸಲಾಗುವುದು | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ |

| | | | |
|---|---|---|---|
| 14 | ಜ್ಞಾನೇಶ್ವರಿ ಬಡಾವಣೆಯ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಪೈಪ್‌ಲೈನ್ ಬ್ಲಾಕ್ ಆಗಿರುವುದರಿಂದ ಸರಿಪಡಿಸಲು ಕೋರಿದ್ದು, ಸಿಲ್ಟ್ ಗಾಡಿ ದುರಸ್ಥಿಗೊಂಡಿರುವ ಬಗ್ಗೆ, ಜ್ಞಾನೇಶ್ವರಿ ಬಡಾವಣೆಯಲ್ಲಿ 3 ಲೇನ್ ಪೈಪ್‌ಲೈನ್ ಸಂಪರ್ಕ ಕಲ್ಪಿಸಿರುವುದರಿಂದ ಒಳಚರಂಡಿ ವ್ಯವಸ್ಥೆ ಪದೇ ಪದೇ ಬ್ಲಾಕ್ ಆಗುತ್ತಿರುವುದರಿಂದ ಮ್ಯಾನ್ ಹೋಲ್ ಲೈನ್ ಡೈವರ್ಟ್ ಮಾಡಲು ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಕ್ರಮ ವಹಿಸಲು ತಿಳಿಸಲಾಗುವುದು | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 15 | ಹೆಚ್.ಎಂ.ಟಿ ಬಡಾವಣೆ, 2ನೇ ಬ್ಲಾಕ್, 13ನೇ ಅಡ್ಡರಸ್ತೆ, ಸ್ವತ್ತಿನ ಸಂಖ್ಯೆ 148ರ ಮುಂಭಾಗ ನೀರಿನ ಪೈಪ್‌ಲೈನ್ ಅಳವಡಿಸುವಾಗ ರಸ್ತೆ ಕತ್ತರಿಸಿದ್ದು ಹಾಗೂ ಬಿ.ಇ.ಎಲ್ 1ನೇ ಬ್ಲಾಕ್, 2ನೇ ಮುಖ್ಯ ರಸ್ತೆ 11ನೇ ಅಡ್ಡರಸ್ತೆಯ ಜಂಕ್ಷನ್, ಸ್ವತ್ತಿನ ಸಂಖ್ಯೆ 206ರ ಮುಂಭಾಗದಲ್ಲಿ ಒಳಚರಂಡಿ ಪೈಪ್‌ಲೈನ್ ಅಳವಡಿಸುವಾಗ ರಸ್ತೆಯನ್ನು ಅಗೆದು ಹಾಳು ಮಾಡಿರುವುದರಿಂದ ರಸ್ತೆಯನ್ನು ಸರಿಪಡಿಸಲು ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಕ್ರಮ ವಹಿಸಲು ತಿಳಿಸಲಾಗುವುದು | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 16 | ಹೆಚ್.ಎಂ.ಟಿ ಬಡಾವಣೆಯಿಂದ ವಿದ್ಯಾರಣ್ಯಪುರ ಮುಖ್ಯ ರಸ್ತೆವರೆಗೆ ವಿದ್ಯುತ್ ಕಂಬಗಳನ್ನು ಅಳವಡಿಸುವ ಕಾರ್ಯ ಬಾಕಿ ಇರುವುದಾಗಿ, ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಮಣ್ಣು ಇರುವ ಜಾಗದಲ್ಲಿ ಕಂಬಗಳನ್ನು ಅಳವಡಿಸಿರುವುದಾಗಿ, ಸಿಂಡಿಕೇಟ್ ಬ್ಯಾಂಕ್ ಹತ್ತಿರ ಸರ್ಕಲ್‌ನಲ್ಲಿರುವ ಹೈಮಾಸ್ಟ್ ಲೈಟ್ ಸರಿಪಡಿಸಲು ಹಾಗೂ ಬೀದಿ ದೀಪಗಳನ್ನು ಸರಿಯಾಗಿ ಅಳವಡಿಸದೆ ಇರುವ ಬಗ್ಗೆ ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ದೂರುಗಳನ್ನು ಸರಿಪಡಿಸಲು 15-20 ದಿನಗಳ ಕಾಲಾವಕಾಶ ಕೇಳಿರುತ್ತಾರೆ | ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ |
| 17 | ದುರ್ಗಾ ದೇವಸ್ಥಾನದ ರಸ್ತೆ ಹಾಗೂ ವೆಂಕಟೇಶ್ವರ ದೇವಸ್ಥಾನದ ರಸ್ತೆಯಲ್ಲಿ ಬೀದಿ ದೀಪಗಳಿಗೆ ಅಡ್ಡಲಾಗಿ ಮರದ ಕೊಂಬೆಗಳು ಬೆಳೆದಿರುವುದರಿಂದ ಟ್ರಿಮ್ ಮಾಡಲು ನಿರ್ದೇಶನ ನೀಡಲು, ದುರ್ಗಾ ದೇವಸ್ಥಾನದ ರಸ್ತೆಯಲ್ಲಿ ಅಟೋಮ್ಯಾಟಿಕ್ ಸ್ವಿಚ್ ಅಳವಡಿಸಲು ಕೋರಿದರು | ಸಂಬಂಧಿಸಿದ ಇಲಾಖೆಗೆ ಕ್ರಮ ವಹಿಸಲು ತಿಳಿಸಲಾಗುವುದು. | ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ಮತ್ತು ವಲಯ ಅರಣ್ಯ ವಿಭಾಗ |
| 18 | ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡುತ್ತಿರುವ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಕೋರಲಾಯಿತು. | ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಒದಗಿಸಿದ ನಂತರ ತೆರವುಗೊಳಿಸಲು ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಲಾಗುವುದು | ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ ಉಪ ವಿಭಾಗ /ಸಹಾಯಕ ಕಂದಾಯ ಅಧಿಕಾರಿ NULM |
| 19 | ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ಕೋರಿದರು. | ಎಸ್.ಡಬ್ಲ್ಯೂ.ಡಿ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗುವುದು. | ಎಸ್.ಡಬ್ಲ್ಯೂ.ಡಿ ಇಲಾಖೆ |

ಡಾ॥ ಪುಷ್ಪಲತ, ವೈದ್ಯಾಧಿಕಾರಿ :- ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತವಾಗಿ ಕೋವಿಡ್ ಬೂಸ್ಟರ್ ಲಸಿಕೆ ಕೊಡುವ ಯೋಜನೆ ಸೆಪ್ಟೆಂಬರ್ 30ಕ್ಕೆ ಅಂತ್ಯವಾಗುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ಹಾಗೂ ಬೂಸ್ಟರ್ ಲಸಿಕೆಯ ಕಾಲಾವಧಿಯನ್ನು 9 ತಿಂಗಳಿನಿಂದ 6 ತಿಂಗಳಿಗೆ ಇಳಿಸಲಾಗಿದೆ ಎಂದು ತಿಳಿಸಿದರು.

ನಾಯಿ ಕಚ್ಚಿದರೆ ಬಿ.ಪಿ.ಎಲ್ ಕಾರ್ಡಿನ ಸೌಲಭ್ಯವನ್ನು ಹೊಂದಿರುವವರು ಉಚಿತವಾಗಿ 4 ಲಸಿಕೆಗಳನ್ನು ಪಡೆದುಕೊಳ್ಳಬಹುದು, ಇಲ್ಲದೆ ಇದ್ದ ಪಕ್ಷದಲ್ಲಿ 1 ಲಸಿಕೆಯನ್ನು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತವಾಗಿ ಪಡೆಯಬಹುದು.

ಗರ್ಭಿಣಿ, ಬಾಣಂತಿಯರಿಗೆ ಕಬ್ಬಿಣಾಂಶ, ವಿಟಮಿನ್ 'ಡಿ', ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡುತ್ತಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸಲು ತಿಳಿಸಿದರು.

ಇನ್ನು 1 ತಿಂಗಳಲ್ಲಿ Virtual Clinic ತೆರೆದು ಒಬ್ಬ ಗಣಕ ಯಂತ್ರ ನಿರ್ವಾಹಕರು, ಪ್ರಯೋಗಿಕ ತಂತ್ರಜ್ಞರನ್ನು ನೇಮಿಸಿ ಅಂತರ್ಜಾಲದ ಮುಖಾಂತರ ಉಚಿತವಾಗಿ ಚಿಕಿತ್ಸೆ ನೀಡುವಂತಹ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಪ್ರಯತ್ನ ಮಾಡುತ್ತಿರುವುದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಲು ಸಾರ್ವಜನಿಕರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಲು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಷ್ಟ ರೋಗ ಆರೋಗ್ಯ ತಪಾಸಣೆಯ ಸರ್ವೆ ಮಾಡುತ್ತಿದ್ದು, ಮನೆ ಮನೆಗೆ ಬಂದಾಗ ಸಾರ್ವಜನಿಕರು ಸಹಕರಿಸಿ ಮಾಹಿತಿ ನೀಡುವಂತೆ ಜನರಲ್ಲಿ ಅರಿವು ಮೂಡಿಸಲು ತಿಳಿಸಿದರು.

ಆಯುಷ್ಮಾನ್ ಭಾರತ್ ವತಿಯಿಂದ ಅಮೃತ ಮಹೋತ್ಸವದ ಅಂಗವಾಗಿ ಆಸ್ಪತ್ರೆಗಳಲ್ಲಿ ದಾಖಲಾದರೆ ಶೇ 50 ರಷ್ಟು ರಿಯಾಯಿತಿ ನೀಡುತ್ತಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆಸಿಕೊಳ್ಳಲು ತಿಳಿಸಿದರು.

ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗುವುದು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಕೋರಲಾಗಿರುತ್ತದೆ.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

19/09/2022

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೋಡೆಲ್ ಅಧಿಕಾರಿಗಳು
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ವಲಯ ಅರಣ್ಯಾಧಿಕಾರಿ, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಹಿರಿಯ ಸಹಾಯಕ ನಿರ್ದೇಶಕರು (ತೋಟಗಾರಿಕೆ), ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬೆಸ್ಕಾಂ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಪೋಲೀಸ್ ಇನ್ಸ್‌ಪೆಕ್ಟರ್, ಸಂಚಾರ ಪೋಲೀಸ್ ಠಾಣೆ, ವಿದ್ಯಾರಣ್ಯಪುರ/ಕೊಡಿಗೆಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಸಹಾಯಕ ಕಂದಾಯ ಅಧಿಕಾರಿ, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ವಾರ್ಡ್ ಸಮಿತಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
16. ಕಛೇರಿ ಕಡತಕ್ಕೆ.